**2018 ಕ.ತೀ.ವ. 963**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ**

**ಡೇನಿಯಲ್ ಆನಂದ್ –ವಿರುದ್ಧ– ಜಿ.ಎನ್. ಸುಜಾತ***

**ವಿಚ್ಛೇದನ ಅಧಿನಿಯಮ, 1869ರ 55(1)ನೇ ಪ್ರಕರಣದ ಹಾಗೂ ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮ, 1984ರ 19(ಸಿ)ರ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.**

**ಪ್ರಸ್ತುತ ಪ್ರಕರಣದಲ್ಲಿ ಪತಿಯು ವಿಚ್ಛೇದನ ಪ್ರಕರಣದಲ್ಲಿ ಪತ್ನಿಗೆ 5 ಲಕ್ಷ ಸಂಪೂರ್ಣ ಪರಿಹಾರ ನೀಡಿ ಕೌಟುಂಬಿಕ ನ್ಯಾಯಾಲಯವು ನೀಡಿದ ಆದೇಶವನ್ನು ಪ್ರಶ್ನಿಸಲಾಗಿದೆ.**

**ಪತಿಯು ದಾಖಲಿಸದ ಪ್ರಕರಣದಲ್ಲಿ ಪತ್ನಿಗೆ ಸಂಪೂರ್ಣ ಪರಿಹಾರವನ್ನು ನೀಡುವುದನ್ನು ಕಾಯಿದೆಯಡಿ ನಿಷೇಧಿಸಿರುವುದಿಲ್ಲ.**

**ವಿಚ್ಛೇದನದ ಪತ್ನಿಗೆ ಗೌರವಯುತ ಜೀವನ ನಡೆಸಲು ಸಂಪೂರ್ಣ ಪರಿಹಾರ ನೀಡುವ ವಿಷಯವು, *ಮಿಸಸ್ ಮಾರ್ಗರೇಟ್ ಪೆರೆರಾ –ವಿರುದ್ಧ– ಮಿ. ಗೆರಾಲ್ಡ್ ಕ್ಯಾಸ್ಟಿಲಿನೊ – ಎಂಎಫ್ಎ 10115/2011 ದಿನಾಂಕ: (04.08.2015)*ದ ದ್ವಿಸದಸ್ಯ ಪೀಠದ ಆದೇಶದಂತೆ ಈಗಾಗಲೇ ಸ್ಥಿರೀಕರಿಸಿದ ಕಾನೂನು ಆಗಿದೆ.**

**ನ್ಯಾಯಾಲಯಗಳು ಕಾನೂನಿನ ನಿಯಮಗಳನ್ನು ಪರಿಶೀಲಿಸುವಾಗ, ಶಾಸಕಾಂಗದ ಉದ್ದೇಶವನ್ನು ಪರಿಗಣಿಸಬೇಕಾಗುತ್ತದೆ. ಈ ಕಾಯಿದೆಯ**

* ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 3929/2017 (ಎಫ್‌ಸಿ),
ದಿನಾಂಕ: 13ನೇ ಜುಲೈ, 2017.

**36 ರಿಂದ 39ರ ಪ್ರಕರಣಗಳನ್ನು ಕೂಲಂಕಷವಾಗಿ ಓದಿದಾಗ ಪ್ರತಿವಾದಿ ಪತ್ನಿಗೆ ಪತಿಯು ಪ್ರಕರಣದಲ್ಲಿ ಸಂಪೂರ್ಣ ಪರಿಹಾರ ನೀಡಲು ಯಾವುದೇ ಅಡೆತಡೆಗಳಿರುವುದಿಲ್ಲ. ಆದ್ದರಿಂದ ಈ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. ಎಂಎಫ್ಎ 10115/2011 (ಡಿಡಿ 04.08.2015)*
*ಶ್ರೀಮತಿ ಮಾರ್ಗರೇಟ್ ಪೆರೀರಾ –ವಿರುದ್ಧ–*
*ಮಿಸ್ಟರ್ ಗೆರಾಲ್ಡ್ ಕ್ಯಾಸ್ಟೆಲಿನೊ (ಉಲ್ಲೇ) 6*
*2. ಎಐಆರ್ 2017 ಎಸ್‌ಸಿ 2383*
*ಕಲ್ಯಾಣ್ ಡೇ ಚೌಧರಿ –ವಿರುದ್ಧ–*
*ರೀಟಾ ಡೇ ಚೌಧರಿ ನೀ ನಂದಿ (ಉಲ್ಲೇ) 8*

ಅಪೀಲುದಾರರ ಪರ : ಶ್ರೀಮತಿ ಎಸ್. ಸುಶೀಲಾ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಎಸ್. ಸುಜಾತ:**

ಮೈಸೂರಿನ Iನೇ ಹೆಚ್ಚುವರಿ ಪ್ರಾರಂಭಿಕ ಕೌಟುಂಬಿಕ ನ್ಯಾಯಾಲಯವು (ಸಂಕ್ಷಿಪ್ತತೆಗಾಗಿ 'ಕೌಟುಂಬಿಕ ನ್ಯಾಯಾಲಯ) ಎಂ.ಸಿ.ಸಂಖ್ಯೆ: 75/2014ರಲ್ಲಿ, ಎದುರುದಾರನಿಗೆ ಶಾಶ್ವತ ಜೀವನಾಂಶ 5 ಲಕ್ಷ ರೂ.ಗಳನ್ನು ಸಂದಾಯ ಮಾಡಲು ಇಲ್ಲಿ ಅಪೀಲುದಾರನಿಗೆ ಸೂಚಿಸಿ, ಹೊರಡಿಸಿದ ತೀರ್ಪು ಮತ್ತು ಆದೇಶದ ವಿರುದ್ಧ ಈ ಅಪೀಲನ್ನು ಸಲ್ಲಿಸಲಾಗಿದೆ.

2. ಸಂಕ್ಷಿಪ್ತ ಸಂಗತಿಗಳು ಹೀಗಿವೆ:

ಅಪೀಲುದಾರ ಮತ್ತು ಎದುರುದಾರರು, ಮೈಸೂರಿನ ಕೃಷ್ಣಮೂರ್ತಿಪುರಂ ನಲ್ಲಿರುವ ಬೆಥೆಲ್ ಬ್ರದರನ್ ಚರ್ಚ್‌ನಲ್ಲಿ ದಿನಾಂಕ: 28.12.2006ರಂದು ಕ್ರಿಶ್ಚಿಯನ್ನರ ಪದ್ಧತಿ ಪ್ರಕಾರ ಇಬ್ಬರೂ ವಿವಾಹವಾಗಿದ್ದಾರೆ. ವಿವಾಹವಾದ ಮೇಲೆ ದಂಪತಿಗಳಿಗೆ ಗ್ರೇಸ್ ಜೆಸಿಂತಾ ಎಂಬ ಹೆಣ್ಣುಮಗುವಾಗಿದ್ದು, ಈಗ ಇವಳಿಗೆ ಸುಮಾರು 8 ವರ್ಷಗಳಾಗಿವೆ. ದಂಪತಿಗಳ ನಡುವೆ ವೈವಾಹಿಕ ಹೊಂದಾಣಿಕೆಯಾಗದ ಕಾರಣದಿಂದ, ಇಲ್ಲಿನ ಅಪೀಲುದಾರರು ವಿವಾಹ ವಿಚ್ಛೇದನ ಅಧಿನಿಯಮ, 1869ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 10(1)(x) ಪ್ರಕರಣದ ಮೇರೆಗೆ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಹೀಗಿದ್ದರೂ, ಎದುರುದಾರರು, ಜೀವನಾಂಶವನ್ನು ಕ್ಲೇಮು ಮಾಡಿ ಅಪೀಲುದಾರನ ವಿರುದ್ಧ ಸಿ. ಸಂಕೀರ್ಣ ಸಂಖ್ಯೆ:437/2014ನ್ನು ಸಲ್ಲಿಸಿದ್ದಾರೆ. ಅಧೀನ ನ್ಯಾಯಾಲಯವು, ಎರಡೂ ಅರ್ಜಿಗಳನ್ನು ಒಟ್ಟುಗೂಡಿಸಿ ದಿನಾಂಕ:01.02.2017ರಂದು ಏಕ ತೀರ್ಪು ಮತ್ತು ಆದೇಶವನ್ನು ಹೊರಡಿಸಿದ್ದಾರೆ. ವಿವಾಹ ವಿಚ್ಛೇದನಕ್ಕಾಗಿ, ಅಪೀಲುದಾರನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿತ್ತು ಮತ್ತು ಜೀವನಾಂಶಕ್ಕಾಗಿ ಎದುರುದಾರಳು ಸಲ್ಲಿಸಿದ ಸಿ. ಸಂಕೀರ್ಣ ಸಂಖ್ಯೆ: 437/2014ನ್ನು ವಜಾಗೊಳಿಸಲಾಗಿತ್ತು. ಆದಾಗ್ಯೂ, ವಿಚ್ಛೇದನದ ಡಿಕ್ರಿಯನ್ನು ಹೊರಡಿಸುವಾಗ, ಅಧೀನ ನ್ಯಾಯಾಲಯವು, 5 ಲಕ್ಷ ರೂ.ಗಳ ಶಾಶ್ವತ ಜೀವನಾಂಶವನ್ನು ಸಂದಾಯ ಮಾಡಲು ಇಲ್ಲಿ ಅಪೀಲುದಾರನಿಗೆ ಸೂಚಿಸಿತ್ತು. 5 ಲಕ್ಷ ರೂ.ಗಳ ಶಾಶ್ವತ ಜೀವನಾಂಶವನ್ನು ಸಂದಾಯ ಮಾಡಲು ಅಪೀಲುದಾರನಿಗೆ ಸೂಚಿಸಿರುವ ಆದೇಶದ ಸದರಿ ಭಾಗವನ್ನು ಇಲ್ಲಿ ಪ್ರಶ್ನಿಸಲಾಗಿದೆ.

3. ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀಮತಿ ಎಸ್. ಸುಶೀಲಾರವರು, ಎರಡು ಆಧಾರಗಳ ಮೇಲೆ ಶಾಶ್ವತ ಜೀವನಾಂಶವನ್ನು ನಿರ್ಧರಿಸಿರುವ ಪ್ರಶ್ನಿತ ಆದೇಶವನ್ನು ಪ್ರಶ್ನಿಸಿದ್ದಾರೆ. ಮೊದಲನೆಯದಾಗಿ, ಅಧಿನಿಯಮದ 37ನೇ ಪ್ರಕರಣವು, ಶಾಶ್ವತ ಪತಿಯು ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಪತ್ನಿಯು ಜೀವನಾಂಶವನ್ನು ಕ್ಲೇಮು ಮಾಡಲು ಹಕ್ಕುಳ್ಳವಳಾಗಿರುವುದಿಲ್ಲ.

ಅಧಿನಿಯಮದ 37ನೇ ಪ್ರಕರಣದ ಮೇಲೆ ಅವಲಂಬಿತರಾಗಿರುವ ಮಾನ್ಯ ವಕೀಲರು, ಕೌಟುಂಬಿಕ ನ್ಯಾಯಾಲಯವು, ಅಧಿನಿಯಮದ 37ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ಚಲಾಯಿಸಿ ಪತ್ನಿಗೆ ಶಾಶ್ವತ ಜೀವನಾಂಶವನ್ನು ನೀಡುವಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆಯೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ. ಎರಡನೆಯದಾಗಿ, ಎದುರುದಾರರು ಸೌಂದರ್ಯತಜ್ಞೆಯಾಗಿದ್ದು ಸಂಪಾದಿಸುವ ಸಾಮರ್ಥ್ಯ ಹೊಂದಿದ್ದಾರೆ, ಅಪೀಲುದಾರನು ಕೇವಲ ಟ್ಯಾಕ್ಸಿ ಚಾಲಕನಾಗಿರುವುದರಿಂದ ಯಾವುದೇ ನಿಶ್ಚಿತ ಆದಾಯವನ್ನು ಹೊಂದಿರುವುದಿಲ್ಲವೆಂದು ವಾದಿಸಿದ್ದಾರೆ. ಅದರ ಜೊತೆಗೆ ಎದುರುದಾರರು ದಾಖಲೆಯಲ್ಲಿರಿಸಿದ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ, ಅಪೀಲುದಾರನ ಆದಾಯದ ಸಂಗತಿಯನ್ನು ರುಜುವಾತುಪಡಿಸಲು, ನ್ಯಾಯಾಲಯವು ನೀಡಿದ 5 ಲಕ್ಷ ರೂ.ಗಳ ಶಾಶ್ವತ ಜೀವನಾಂಶವನ್ನು ಸಂಪೂರ್ಣವಾಗಿ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಹೀಗಾಗಿ ಮಾನ್ಯ ವಕೀಲರು, ಅಪೀಲನ್ನು ಪುರಸ್ಕರಿಸಿ ಶಾಶ್ವತ ಜೀವನಾಂಶವನ್ನು ನೀಡಿರುವ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ಕೋರಿದ್ದಾರೆ.

4. ನಾವು ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿ, ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಅವಲೋಕಿಸಿರುತ್ತೇವೆ.

5. ಮೊದಲ ವಿವಾದಾಂಶಕ್ಕೆ ಸಂಬಂಧಪಟ್ಟಂತೆ, ನಾವು, 'ಜೀವನಾಂಶ' ಪದಾವಳಿಯ ಅರ್ಥ ವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳಲು ಕಾನೂನು ನಿಘಂಟನ್ನು ಪರಾಮರ್ಶಿಸುವುದು ಉಚಿತವೆಂದು ಭಾವಿಸುತ್ತೇವೆ ಮತ್ತು ಅದನ್ನು ಈ ಮುಂದಿನಂತೆ ಉದ್ಧೃತಗೊಳಿಸಲಾಗಿದೆ.

> *"ಕಾನೂನಿನ ಅರ್ಥದಲ್ಲಿ, ದಾವೆ ಹೂಡಿರುವ ವಿವಾಹಿತ ಮಹಿಳೆಯು ತನ್ನ ಗಂಡನಿಂದ ಪ್ರತ್ಯೇಕವಾದ ನಂತರ ಹಕ್ಕುಳ್ಳವಳಾಗಿರುವ ಭತ್ಯೆ ತೆಗೆದುಕೊಳ್ಳುವುದು; ಅವಳು ಪ್ರತ್ಯೇಕ ಜೀವನಾಂಶಕ್ಕೆ ತಾನು ಅರ್ಹಳಾಗಿರುವಾಗ, ವಿವಾಹದ ಅವಧಿಯಲ್ಲಾಗಲಿ, ಅಥವಾ ಬಿಟ್ಟಿರುವ ಸನ್ನಿವೇಶದಲ್ಲಾಗಲಿ*

*ಅವಳ ಬೆಂಬಲಕ್ಕೆ ಗಂಡನ ಸ್ಥಾನವನ್ನು ಬಿಟ್ಟು ನೀಡಬೇಕಾದ ಭತ್ಯೆ".*

6. ಆದುದರಿಂದ, ಶಾಶ್ವತ ಜೀವನಾಂಶವು, ವಿಚ್ಛೇದನವಾದ ನಂತರ ಹೆಂಡತಿಯು ಸಭ್ಯ ಜೀವನವನ್ನು ನಡೆಸಲು ಅಧಿನಿಯಮದ ಉಪಬಂಧಗಳ ಮೇರೆಗೆ ಹೆಂಡತಿಗೆ ಬೆಂಬಲವನ್ನು ನೀಡುತ್ತದೆ. ಅವಳು ತನ್ನ ಜೀವನವನ್ನು ನಿರ್ವಹಿಸಿಕೊಳ್ಳಲು ಸಮರ್ಥಳಾಗಿರದಿದ್ದರೆ, ಅವಳು ಅಲೆಮಾರಿಯಂತಾಗದಿರಲೆಂದು ಇದು ಹೆಂಡತಿಗೆ ಸಹಾಯಕವಾಗುತ್ತದೆ. ಶಾಶ್ವತ ಜೀವನಾಂಶದ ಮೊತ್ತವು, ಮಹಿಳೆಯು ತಾನು ಗಂಡನಿಂದ ಪ್ರತ್ಯೇಕಗೊಂಡ ನಂತರ ಗೌರವಯುತವಾಗಿ ಜೀವಿಸುವುದನ್ನು ಖಚಿತಪಡಿಸಲು ಸಾಕಷ್ಟಿರಬೇಕೆಂಬುದು ಸದ್ಯದಲ್ಲಿರುವ ಸುಸ್ಥಾಪಿತ ಸ್ಥಾನವಾಗಿದೆ. ಅಧಿನಿಯಮದ ಉಪಬಂಧಗಳ ಮೇರೆಗೆ ಹೆಂಡತಿಗೆ ಶಾಶ್ವತ ಜೀವನಾಂಶವನ್ನು ನೀಡುವುದಕ್ಕೆ ಸಂಬಂಧಪಟ್ಟಿರುವುದನ್ನು ಪರಿಗಣಿಸಲಾಗಿದ್ದು, ***ಶ್ರೀಮತಿ ಮಾರ್ಗರೇಟ್ ಪೆರೇರಾ –ವಿರುದ್ಧ– ಮಿಸ್ಟರ್ ಗೆರಾಲ್ಡ್ ಕ್ಯಾಸ್ಟೆಲಿನೊ*** [1] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ದೃಷ್ಟಿಕೋನದಲ್ಲಿ, ವಿವಾದವು ಹೆಚ್ಚಾಗಿ ಅನಿರ್ಣೀತ ವಿಷಯವಾಗಿರುವುದಿಲ್ಲ. ಸಂಬಂಧಪಟ್ಟ ಕಂಡಿಕೆಯನ್ನು ಇಲ್ಲಿ ಉದ್ಧೃತಗೊಳಿಸಲಾಗಿದೆ:

*"8. ನಾವು, ಕಟಕಟೆಯಲ್ಲಿ ಮಾಡಲಾದ ಪರಸ್ಪರ ನಿವೇದನೆಗಳಿಗೆ ನಮ್ಮ ಕಾಳಜಿ ಪೂರ್ವಕ ಪರಿಗಣನೆಯನ್ನು ನೀಡಿದ್ದೇವೆ. ಗಂಡನ ಪರವಾಗಿ ವಿವಾಹದ ವಿಘಟನೆಯನ್ನು ಮಾಡಿದ್ದಲ್ಲಿ, ಆ ಸಂದರ್ಭದಲ್ಲಿ ಪತ್ನಿಯು, ಶಾಶ್ವತ ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುವುದಿಲ್ಲ ಎಂಬ ವಾದವು ಸರಿಯಾದ ಪ್ರತಿಪಾದನೆಯಾಗದಿರಬಹುದು. ಅಧಿನಿಯಮದ 36ರಿಂದ 39 ಪ್ರಕರಣಗಳು ಬಾಧಿತಳಾದ ಪತ್ನಿಗೆ ನೀಡಬೇಕಾದ ಜೀವನಾಂಶದ ವಿಷಯವನ್ನು ಒಳಗೊಂಡಿವೆ. 36ನೇ ಪ್ರಕರಣವು,*

1. ಎಂಎಫ್ಎ 10115/2011 (ದಿನಾಂಕ: 04.08.2015)

*ಹೆಂಡತಿಗೆ ನೀಡಬೇಕಾದ ವ್ಯಾಜ್ಯಕಾಲೀನ ಜೀವನಾಂಶಕ್ಕೆ ಸಂಬಂಧಪಡುತ್ತದೆ. 37ನೇ ಪ್ರಕರಣವು, ವಿವಾಹದ ವಿಘಟನೆಯ ಡಿಕ್ರಿ ಅಥವಾ ನ್ಯಾಯಿಕವಾಗಿ ಪ್ರತ್ಯೇಕವಾಗಿರುವ ಡಿಕ್ರಿಯನ್ನು ಹೆಂಡತಿಯು ಪಡೆದುಕೊಂಡಿದ್ದಲ್ಲಿ, ಹೆಂಡತಿಗೆ ನೀಡಬೇಕಾದ ಶಾಶ್ವತ ಜೀವನಾಂಶಕ್ಕೆ ಸಂಬಂಧಪಡುತ್ತದೆ. 38ನೇ ಪ್ರಕರಣವು, ಪ್ರಸ್ತುತ ಸನ್ನಿವೇಶಗಳಿಗೆ ಸಂಬಂಧಪಟ್ಟ ಉಪಬಂಧವಾಗಿದ್ದು, ಅದನ್ನು ಹೀಗೆ ಓದಲಾಗಿದೆ:*

***"38. ನ್ಯಾಯಾಲಯವು, ಹೆಂಡತಿಗೆ ಅಥವಾ ಅವಳ ಟ್ರಸ್ಟಿಗೆ ಜೀವನಾಂಶವನ್ನು ಸಂದಾಯ ಮಾಡಲು ನಿರ್ದೇಶಿಸಬಹುದು:–***

*ನ್ಯಾಯಾಲಯವು, ಜೀವನಾಂಶಕ್ಕಾಗಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಮಾಡಿರುವ ಎಲ್ಲಾ ಪ್ರಕರಣಗಳಲ್ಲಿ, ಪತ್ನಿಗೇ ಆಗಲಿ ಅಥವಾ ನ್ಯಾಯಾಲಯವು ರುಜುವಾತು ಪಡಿಸಿರುವ ಅವಳ ಪರವಾದ ಯಾರೇ ಟ್ರಸ್ಟಿಗೇ ಆಗಲಿ ಅದನ್ನು ಸಂದಾಯ ಮಾಡಬೇಕಾಗುತ್ತದೆ ಮತ್ತು ನ್ಯಾಯಾಲಯಕ್ಕೆ ಯುಕ್ತವೆಂದು ತೋರಬಹುದಾದ ಯಾವುದೇ ಷರತ್ತು ಮತ್ತು ನಿರ್ಬಂಧಗಳನ್ನು ಹೇರಬಹುದು ಮತ್ತು ನ್ಯಾಯಾಲಯಕ್ಕೆ ಹಾಗೆ ಮಾಡುವುದು ಯುಕ್ತವೆಂದು ಕಂಡುಬಂದರೆ ಕಾಲಕಾಲಕ್ಕೆ ಹೊಸ ಟ್ರಸ್ಟಿಯನ್ನು ನೇಮಿಸಬಹುದು."*

*ಮೇಲಿನ ಉಪಬಂಧದ ಸರಳ ಓದಿನಿಂದ, ನ್ಯಾಯಾಲಯವು, ಅವಳಿಗೆಯಾಗಲಿ ಅಥವಾ ಹೆಂಡತಿ ಅಥವಾ ಗಂಡನಿಗಾಗಲಿ ಯಾವುದೇ ಸಂದರ್ಭದಲ್ಲಿ ಪ್ರಕರಣವನ್ನು ಹೂಡಿದ್ದಲ್ಲಿ ಅವಳ ಟ್ರಸ್ಟಿಗೆ ಶಾಶ್ವತ ಜೀವನಾಂಶವನ್ನು*

*ಆದೇಶಿಸಬಹುದೆಂಬುದನ್ನು ಉದ್ದೇಶಿಸುತ್ತದೆ. ವ್ಯಕ್ತವಾಗಿ ಅಥವಾ ಇಂಗಿತವಾಗಿ, ಪರಿನಿಯಮವು, ಶಾಶ್ವತ ಜೀವನಾಂಶಕ್ಕಾಗಿ ವಿಚ್ಛೇದನ ಅರ್ಜಿಯಲ್ಲಿ ಎದುರುದಾರಳಾಗಿದ್ದ ಪತ್ನಿಯನ್ನು ಪ್ರತಿಷೇಧಿಸುವುದಿಲ್ಲ.*

*9. ಅಧಿಕಾರ ವ್ಯಾಪ್ತಿಯುಳ್ಳ ಜೆಎಂಎಫ್‌ಸಿ ನ್ಯಾಯಾಲಯವು ಆದೇಶವನ್ನು ಹೊರಡಿಸಿದ ಕಾರಣದಿಂದ ಮುಖ್ಯವಾಗಿ ಅವಳು ಈಗಾಗಲೇ ಜೀವನಾಂಶ ಮೊತ್ತವನ್ನು ಅನುಭೋಗಿಸುತ್ತಿರುವಳು. ಆದುದರಿಂದ, ಅವಳು ಪ್ರತ್ಯೇಕ ಶಾಶ್ವತ ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುವುದಿಲ್ಲ ಎಂಬ ಆಧಾರದ ಮೇಲೆ ಅಧೀನ ನ್ಯಾಯಾಲಯವು ಅವಳ ಅರ್ಜಿಯನ್ನು ವಜಾಗೊಳಿಸಿದೆ. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಅಧೀನ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣವನ್ನು ಆ ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮದ 38ನೇ ಪ್ರಕರಣಕ್ಕೆ ಸಮಾನೀಕರಿಸುವಲ್ಲಿ ತನಗೆ ತಾನೇ ತಪ್ಪು ನಿರ್ದೇಶನ ಕೊಟ್ಟುಕೊಂಡಿದೆ. ದಂಡ ಪ್ರಕ್ರಿಯಾ ಸಂಹಿತೆಯ 125(1)(ಎ) ಪ್ರಕರಣವು ಹೆಂಡತಿಗೆ ನೀಡಬೇಕಾದ ಜೀವನಾಂಶವನ್ನು ಉದ್ದೇಶಿಸಿದ್ದರೆ, ಪ್ರಸ್ತುತ ಅದೇ ಉಪಬಂಧದ ವಿವರಣೆಯು, 'ಹೆಂಡತಿ' ಎಂಬುದು, ಗಂಡನು ವಿಚ್ಛೇದನ ಕೊಟ್ಟಿರುವ ಅಥವಾ ಗಂಡನಿಂದ ವಿಚ್ಛೇದನ ಪಡೆದುಕೊಂಡಿರುವ ಮತ್ತು ಮರು ವಿವಾಹವಾಗಿರದ ಮಹಿಳೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಅರ್ಜಿಯಲ್ಲಿ ಆದೇಶಿಸಲಾದ ಜೀವನಾಂಶ ಮೊತ್ತವು, ಅದೇ ಪ್ರಕರಣದ ಎರಡನೇ ಪರಂತುಕದಲ್ಲಿ ಉಪಬಂಧಿಸಲಾದಂಥ ಮಾಸಿಕ ಭತ್ಯೆಯಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ, ಶಾಶ್ವತ ಜೀವನಾಂಶ ಆದೇಶಕ್ಕೆ*

*ಉಪಬಂಧವಿರುವುದಿಲ್ಲ. ಗಂಡನು ತಪ್ಪು ಮಾಡಿದ್ದ ಹೊರತು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಹೆಂಡತಿಯ ಪರವಾಗಿ ಆದೇಶವನ್ನು ಹೊರಡಿಸಿದ್ದರೂ, ಮತ್ತು ಮಾಸಿಕ ಭತ್ಯೆ ಬಾಕಿ ಉಳಿದಿದ್ದರೂ, ಹೆಂಡತಿಯು, ಜೀವನಾಂಶ ಮೊತ್ತವನ್ನು ವಸೂಲಿ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 128ನೇ ಪ್ರಕರಣವನ್ನು ಅನ್ವಯಿಸಲಾಗುವುದಿಲ್ಲ. ಇದು ಜೀವನಾಂಶವನ್ನು ಸಂದಾಯ ಮಾಡಲು ಗಂಡನ ಕಡೆಯಿಂದಾದ ತಪ್ಪಿಗೆ ಮಾತ್ರ ತಪ್ಪನ್ನು ಎಸಗಿದ ದಿನಾಂಕದಿಂದ 11 ತಿಂಗಳುಗಳ ಮಿತಿಯ ಅವಧಿಯೊಳಗೆ ಮೊತ್ತವನ್ನು ವಸೂಲಿ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 128ನೇ ಪ್ರಕರಣದ ಮೇರೆಗೆ ಜೀವನಾಂಶ ಆದೇಶವನ್ನು ಜಾರಿಗೊಳಿಸಬಹುದು. ಇದರಿಂದ ಅಧಿನಿಯಮದ 37ನೇ ಪ್ರಕರಣದ ಮೇರೆಗೆ ಶಾಶ್ವತ ಜೀವನಾಂಶಕ್ಕಾಗಲಿ ಅಥವಾ ಮಾಸಿಕ ಅಥವಾ ವಾರದ ಸಂದಾಯದ ಮೂಲಕವಾಗಲಿ ಸಾಧ್ಯವಾಗುತ್ತದೆ. ಅಧಿನಿಯಮದ 37 ಮತ್ತು 38ನೇ ಪ್ರಕರಣಗಳನ್ನು ಪರಸ್ಪರ ಒಂದನ್ನೊಂದು ಸೇರಿಸಿ ಓದಿಕೊಂಡಾಗ, ಅಧಿನಿಯಮದ 37ನೇ ಪ್ರಕರಣದ ಮೇರೆಗೆ ಲಭ್ಯವಿರಬಹುದಾದಂತೆ ಎಲ್ಲಾ ಪ್ರಕರಣಗಳಿಗೂ ಜೀವನಾಂಶದ ಸಂದಾಯದ ಪರಿಹಾರವನ್ನು ಅನ್ವಯಿಸಬಹುದು. ನಮ್ಮ ಪರಿಗಣನೆಯ ಅಭಿಪ್ರಾಯದಲ್ಲಿ ಈ ನ್ಯಾಯಾಲಯವು, ಜೆಎಂಎಫ್‌ಸಿ ನ್ಯಾಯಾಲಯವು ಹೊರಡಿಸಿದ ಜೀವನಾಂಶದ ಆದೇಶವನ್ನು ಹೊಂದಿದ್ದಳು ಎಂಬ ಆಧಾರದ ಮೇಲೆ ಹೆಂಡತಿಯ ಪರವಾಗಿ 38ನೇ ಪ್ರಕರಣದ ಪ್ರಯೋಜನವನ್ನು ಅನ್ವಯಿಸುವುದನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುವುದಿಲ್ಲ. ಜೆಎಂಎಫ್‌ಸಿ ನ್ಯಾಯಾಲಯವು ಹೊರಡಿಸಿದ ಜೀವನಾಂಶ ಮೊತ್ತವನ್ನು ದೃಷ್ಟಿಯಲ್ಲಿಟ್ಟುಕೊಂಡು 38ನೇ ಪ್ರಕರಣದ ಮೇರೆಗೆ ಆದೇಶ*

*ಹೊರಡಿಸಲು ಈಗಲೂ ಸಾಧ್ಯವಿತ್ತು. ಆ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಧೀನ ನ್ಯಾಯಾಲಯವು, ಎರಡೂ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ತರುವಾಯ ಶಾಶ್ವತ ಜೀವನಾಂಶದ ಪ್ರಶ್ನೆ ಕುರಿತ ವಿಚಾರಣೆಯನ್ನು ನಡೆಸಬೇಕಾಗುತ್ತದೆಯೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಈ ಸಂದರ್ಭದಲ್ಲಿ, ನಾವು, ಪತ್ನಿಗೆ 30 ಲಕ್ಷ ರೂ.ಗಳ ಶಾಶ್ವತ ಜೀವನಾಂಶವನ್ನು ಕೋರಿದ್ದು, ಅಧಿನಿಯಮದ 37ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಲಾಗಿತ್ತು ಎಂಬುದನ್ನು ಗಮನಿಸಿದ್ದೇವೆ. ಆದರೆ, ಡಿಕ್ರಿಗೊಳಿಸಲಾಗುತ್ತಿರುವ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಗಂಡನ ಅರ್ಜಿಯ ಸನ್ನಿವೇಶಗಳಲ್ಲಿ ಅನ್ವಯಿಸಬಹುದಾದ ಉಪಬಂಧವು ಅಧಿನಿಯಮದ 38ನೇ ಪ್ರಕರಣವಾಗಿದೆ. ಆದಾಗ್ಯೂ, ಕಾನೂನಿನ ತಪ್ಪು ಉಪಬಂಧವನ್ನು ಉದ್ಧರಿಸಿ, ಯಾವ ಪರಿಹಾರಕ್ಕಾಗಿ ಅವನು/ಅವಳು ಹಕ್ಕುಳ್ಳವರಾಗಿರುವರೋ ಅದಕ್ಕೆ ಪಕ್ಷಕಾರರನ್ನು ಅನರ್ಹಗೊಳಿಸತಕ್ಕದ್ದಲ್ಲ."*

7. ಅಧಿನಿಯಮದ ಉಪಬಂಧಗಳ ಉದ್ದೇಶಪೂರ್ವಕ ಪ್ರಸ್ತಾವವು, ಅಕ್ಷರಶಃ ಅರ್ಥಾನ್ವಯಕ್ಕಿಂತ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ಸಾಧನವಾಗುತ್ತದೆ. ಅರ್ಥೈಸುವಿಕೆಯ ಪ್ರಧಾನ ನಿಯಮವು ಕಾನೂನು ಉದ್ದೇಶವನ್ನು ಸಂಪೂರ್ಣವಾಗಿ ದೃಢಪಡಿಸಲು ಸುವ್ಯವಸ್ಥಿತವಾಗಿ ಪರಿನಿಯಮವನ್ನು ಓದಿಕೊಳ್ಳಬೇಕು ಎಂಬುದಾಗಿದೆ. ಅಧಿನಿಯಮದ 36 ರಿಂದ 39ನೇ ಪ್ರಕರಣಗಳ ಸಂಯುಕ್ತ ಓದುವಿಕೆ, ಶಾಶ್ವತ ಜೀವನಾಂಶವನ್ನು ಕೋರಲು ವಿಚ್ಛೇದನ ಅರ್ಜಿಯಲ್ಲಿ ಎದುರುದಾರ ಪತ್ನಿಗೆ ಅಧಿನಿಯಮದ ಮೇರೆಗೆ ಯಾವುದೇ ಕಾನೂನಾತ್ಮಕ ಅಡ್ಡಿ ಅಥವಾ ನಿರ್ಬಂಧವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ತದನುಸಾರವಾಗಿ, ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಮೊದಲ ವಾದವು ರದ್ದುಪಡಿಸಲು ಅರ್ಹವಾಗಿದೆಯೆಂಬುದಾಗಿದ್ದು ತದನುಸಾರವಾಗಿ ವಜಾಗೊಳಿಸಬೇಕು ಎಂಬುದಾಗಿದೆ.

8. ಎರಡನೇ ವಿವಾದಾಂಶಕ್ಕೆ ಸಂಬಂಧಪಟ್ಟಂತೆ, ಶಾಶ್ವತ ಜೀವನಾಂಶವನ್ನು ಮಂಜೂರು ಮಾಡುವಾಗ ಹಿಂದೆ ಹೇಳಲಾದಂತೆ ಸಂಬಂಧಪಟ್ಟ ಸಂಗತಿಗಳನ್ನು ವಿಚಾರಣೆ ಮಾಡುವುದು ಅಗತ್ಯವಾಗಿದ್ದು, ಅವು; (1) ಹಣಕಾಸು ಪರಿಸ್ಥಿತಿ; (2) ಪಕ್ಷಕಾರರ ಜೀವನಮಟ್ಟ; (3) ವಿವಾಹದ ಅವಧಿ; (4) ಪಕ್ಷಕಾರರ ವಯಸ್ಸು; (5) ಪಕ್ಷಕಾರರ ವಾಸ್ತವಿಕ ಸ್ಥಿತಿ; ಮತ್ತು (6) ಸ್ವೀಕರ್ತನನ್ನು ಬೆಂಬಲಿಸಲು ವ್ಯಕ್ತಿಯ ಸಾಮರ್ಥ್ಯ. ಇತ್ತೀಚಿನ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವರದಿ ಮಾಡಲಾದ ***ಕಲ್ಯಾಣ್ ಡೇ ಚೌಧರಿ –ವಿರುದ್ಧ– ರೀಟಾ ಡೇ ಚೌಧರಿ ನೀ ನಂದಿ*** [2] ಪ್ರಕರಣದಲ್ಲಿ, ಇದು, ಶೇಕಡಾ 25ರಷ್ಟು ಇರುವ ಗಂಡನ ಆದಾಯವು, ಹೆಂಡತಿಗೆ ಯುಕ್ತ ಜೀವನಾಂಶ ಮೊತ್ತವಾಗುತ್ತದೆಯೆಂದು ಅಭಿಪ್ರಾಯಪಟ್ಟಿದ್ದು, ಸರ್ವೋಚ್ಚ ನ್ಯಾಯಾಲಯುವು, ಮಾನದಂಡವನ್ನು ರೂಪಿಸಿದೆಯೆಂಬುದನ್ನು ಗಮನಿಸುವುದು ಮಹತ್ವದ್ದಾಗಿದೆ. ಕೌಟುಂಬಿಕ ನ್ಯಾಯಾಲಯವು, ಶಾಶ್ವತ ಜೀವನಾಂಶಕ್ಕೆ ಸಂಬಂಧಿಸಿದ ಮೊತ್ತವನ್ನು ನಿರ್ಧರಿಸಲು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಗಣಿಸಿದ್ದು, ಇದು ಸ್ಥಾನಮಾನದ ಕಾರಣದಿಂದ ವ್ಯಕ್ತಿಯ ಆರ್ಥಿಕ ಸಾಮರ್ಥ್ಯವನ್ನು ಆಧರಿಸಿದ್ದು, ಹೆಂಡತಿಯ ಅವಲಂಬನೆಯು ಗ್ರಾಹಕ ಬೆಲೆಗಳಲ್ಲಿನ ಏರಿಕೆ ಮತ್ತು ಹಣದ ಮೌಲ್ಯ ಇವೆರಡಕ್ಕೂ ಸಂಬಂಧಿಸಿದ್ದು, 5 ಲಕ್ಷ ರೂ.ಗಳಿಗೆ ನಿರ್ಧರಿಸಲಾದ ಜೀವನಾಂಶ ಮೊತ್ತವನ್ನು ಯಾವುದೇ ಊಹೆಯ ದೃಷ್ಟಿಯಲ್ಲಿ ನೋಡಿದರೂ ಅದನ್ನು ಅಧಿಕ ಅಥವಾ ಅಪಾರವೆಂದು ಪರಿಗಣಿಸಲು ಸಾಧ್ಯವಿಲ್ಲ. ತದನುಸಾರವಾಗಿ, ಅಧೀನ ನ್ಯಾಯಾಲಯದ ಸಕಾರಣಯುಕ್ತ ಆದೇಶದಲ್ಲಿ ಮೂಗು ತೂರಿಸಲು ನಾವು ಒಲವು ತೋರುವುದಿಲ್ಲ.

9. ಹಿಂದೆ ಹೇಳಲಾದ ಕಾರಣಗಳಿಗಾಗಿ, ಗುಣಾರ್ಹತೆಗಳಿಲ್ಲದಿರುವುದರಿಂದ ಅಪೀಲನ್ನು ವಜಾಗೊಳಿಸಲಾಗಿದೆ.

ಪ್ರಶ್ನಿತ ಆದೇಶಕ್ಕೆ ತಡೆ ನೀಡಲು ಕೋರಿರುವ ಐಎ–2/2017ನ್ನು, ಅಪೀಲನ್ನು ವಜಾಗೊಳಿಸುವ ಕಾರಣಕ್ಕೆ ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

---

2. ಎಐಆರ್ 2017 ಎಸ್‌ಸಿ 2383